# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಚಾಮರಾಜನಗರ.

## ಸ್ಪೆಷಲ್ ಕೇಸ್ ಸಂಖ್ಯೆ: 173/2020

**ಚಾಸಾ–7**

**ಫ್ರಾಸಾ–3**

**ದಿನಾಂಕ** 07.08.2026 **ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಹೆಸರು** : ಕೊಳಂದೈಮ್ಮ

**ಗಂಡನ ಹೆಸರು** : ಸೆಲ್ವರಾಜು

**ವಯಸ್ಸು** : 69 ವರ್ಷ

**ವೃತ್ತಿ** : ಕೂಲಿ ಕೆಲಸ

**ವಾಸ ಸ್ಥಳ** : ಜಾಗೇರಿ, ಪ್ರಕಾಶ್ ಪಾಳ್ಯ.

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :–**

ಆರೋಪಿ ನನ್ನ ಮಗ. ಚಾಸಾ–8 ನನ್ನ ಮಗ. ನನಗೆ ನನ್ನ ಗಂಡನಿಂದ ಪ್ರಕಾಶ ಪಾಳ್ಯ ಗ್ರಾಮದಲ್ಲಿ ಒಟ್ಟು 10 ಎಕರೆ ಜಾಗವಿದ್ದು, ಸದರಿ ಜಾಗವನ್ನು ನಾವು 7 ಜನ ಪಾಲು ಮಾಡಿಕೊಂಡು ಮಳೆಯಿಲ್ಲದ ಕಾರಣ ಖಾಲಿ ಬಿಟ್ಟಿರುತ್ತೇವೆ. ಆರೋಪಿಯು ಸದರಿ ಜಾಗದಲ್ಲಿ ಯಾವ ಬೆಳೆಯನ್ನು ಬೆಳೆದಿರುವುದಿಲ್ಲ. ಆರೋಪಿಯು ತನ್ನ ಸ್ವಾಧೀನದಲ್ಲಿದ್ದ ಜಾಗದಲ್ಲಿ ಮಾದಕ ವಸ್ತು ಗಿಡಗಳನ್ನು ಬೆಳೆದಿರುವ ಬಗ್ಗೆ ಅಮಾನತ್ತುಪಡಿಸಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ವೇಳೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೇಳಿದರು. ನಂತರ ಅನುಮತಿ ನೀಡಲಾಯಿತು.)**

**ಪಾಟೀ ಸವಾಲು – ಮಾನ್ಯ ಸರ್ಕಾರಿ ಅಭಿಯೋಜಕರಿಂದ :-**

ದಿಃ11.09.2018 ರಂದು ಚಾಸಾ-1 ಮತ್ತು ಸಿಬ್ಬಂದಿಯವರು ಖಚಿತ ಮಾಹಿತಿ ಮೇರೆಗೆ ಆರೋಪಿಯು ವ್ಯವಸಾಯ ಮಾಡಿಕೊಂಡಿರುವ ಜೋಳದ ಫಸಲಿನ ಜಮೀನಿಗೆ ಬಂದು ಪರಿಶೀಲನೆ ಮಾಡುವಾಗ ಆರೋಪಿಯು ಜೋಳದ ಫಸಲಿನೊಂದಿಗೆ ಗಾಂಜಾ ಗಿಡಗಳನ್ನುಬೆಳೆದಿರುವುದು ಕಂಡು ಬಂತು ಎಂದರೆ ಸರಿಯಲ್ಲ. ಸದರಿ ಗಾಂಜಾ ಗಿಡಗಳನ್ನು ತೂಕ ಮಾಡಿದಾಗ 1ಕೆಜಿ 600 ಗ್ರಾಂ ಹಸಿ ಗಾಂಜಾ ಗಿಡಗಳನ್ನು ಅಮಾನತ್ತುಪಡಿಸಿಕೊಂಡು ಆರೋಪಿಯನ್ನುಬಂಧಿಸಿ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ನಿಪಿ-30 ರಂತೆ ಪೊಲೀಸ್ ರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ನೀಡಿದ್ದರೂ ಆರೋಪಿ ನನ್ನ ಮಗನಾದ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು – ಆರೋಪಿ ಪರ ವಕೀಲರಿಂದ –**

ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓದಿ ಹೇಳಲಾಗಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಾಮರಾಜನಗರ.**